ಹೇಳಲಾರೆ...' ಹತಾಶನಾದೆ. ಕೆಲವು ಕಾಲ ಮೌನ ನಮ್ಮನ್ನು ಆಳಿತು. ನಂತರ ಹೇಳಿದ, 'ಸರಿ... ಒಂದು ಕೆಲಸ ಮಾಡು. ನನಗೆ ನಿನ್ನ ತರಹ ಎಲ್ಲ ಮಾತನಾಡಲು ಬರಲ್ಲ. ಆಗೋದೂ ಇಲ್ಲ. ಅವಳನ್ನ ನಾಳೆ ಮಧ್ಯಾಹ್ನ ಕರೆದುಕೊಂಡು ಬೀಚ್ ರೆಸ್ಟೋರೆಂಟಿಗೆ ಬರ್ತೀನಿ. ಸಂಜೆವರೆಗೂ ಮಾತಾಡಿ. ನನಗೆ ನಿನ್ನ ರೀತಿ ಸರಿ, ತಪ್ಪುಗಳನ್ನು ಕುರಿತು ಯೋಚಿಸಲು ಬರೋದಿಲ್ಲ. ಆದರೆ ನಿನ್ನ ಕಾಳಜಿ ಪ್ರಾಮಾಣಿಕ ಅಂತ ನನಗೆ ಗೊತ್ತು. ಅದರಿಂದ ಅವಳಿಗೆ, ನಮಗೆಲ್ಲ ಒಳ್ಳೆದಾಗುತ್ತೆ ಅಂದ್ರೆ ನಾನು ಯಾಕೆ ತಡೆಯಲಿ?' ಅಂದ.

ಅವನ ಮಾತಿನಲ್ಲೆ ಎಂತಹ ಸ್ನೇಹಪರತೆ ಇತ್ತು ಎಂದರೆ ಆ ವಿಶ್ವಾಸಕ್ಕೆ ನನ್ನ ಹೃದಯ ಕರಗಿಹೋಯಿತು. ನಿನ್ನೆ ಸಂಜೆ ಇವನ ಮಾತೇ ನನಗೆ ಅಷ್ಟು ಕಹಿ ಅನ್ನಿಸಿದ್ದು!! ಅವನ ತಮಾಷೆಯನ್ನು ನಾನು ಗಂಭೀರವಾಗಿ ಪರಿಗಣಿಸಿದ್ದಕ್ಕೆ ನನ್ನ ಕುರಿತು ನಾಚಿಕೆ ಆಯಿತು. ಮನದಲ್ಲೇ 'ಸಾರಿ ಕಣೋ... ಪ್ರಶೀ...' ಅಂದೆ.

'ಏನೋ ನೋಡ್ತ ಇದ್ದೀಯ ಗೂಬೆ ತರಹ...' ಬೆನ್ನಿಗೆ ಗುದ್ದಿದ. 'ಸರಿನಾ... ಕರಕೊಂಡು ಬರ್ಲಾ?' ಅಂದ. 'ಸರಿ ಕಣೊ' ಅಂದೆ. ದಾರಿಯುದ್ದಕ್ಕೂ ಹರಟುತ್ತಾ ಮನೆಗೆ ಬಂದೆವು.

ಶ್ರದ್ಧಾ ಹೆದರಿಬಿಟ್ಟಿದ್ದಳು. ನಮ್ಮಿಬ್ಬರ ನಡುವೆ ಏನು ಕಾಳಗವೋ... ಮತ್ತು ನನ್ನ ಕೋಪದ ಅರಿವಿದ್ದ ಅವಳು ಸಾಕಷ್ಟು ಆತಂಕಗೊಂಡಿದ್ದಳು. ಅಂತಹುದೇನೂ ಇಲ್ಲ ಎಂದು ಅವಳಿಗೆ ಎಲ್ಲವನ್ನೂ ವಿವರಿಸಿದೆ.

ಮರುದಿನ ಮಧ್ಯಾಹ್ನ ಬೀಚ್ ರೆಸ್ಟೋರೆಂಟ್‌ನಲ್ಲಿ ಕಾಯುತ್ತಿದ್ದೆ. ಮುಗಿಲ ಬಣ್ಣದ ಹತ್ತಿ ಸೀರೆ ಉಟ್ಟು, ಹೆಣೆದ ನೀಳ ಕೂದಲನ್ನು ಹಿಂದೆ ಇಳಿಬಿಟ್ಟು, ಮುಂಗುರುಳನ್ನು ಹಣೆಯಮೇಲೆ ತೇಲಿ ಬಿಟ್ಟು ಅಪ್ಸರೆಯಂತೆ ಬಂದು ನಿಂತವಳನ್ನು ಕಂಡು ಮೌನವಾದೆ. ಪ್ರಶಾಂತ ಹೇಳಿದ: 'ನಾನು ಕಾಫಿ ಕುಡಿದು ಹೊರಡುತ್ತೀನಿ. ನೀವಿಬ್ಬರೂ ಮಾತು ಮುಗಿಸಿ. ಸಂಜೆ ಬಂದು ಕರೆದೊಯ್ಯುತ್ತೀನಿ.' ಮೂವರೂ ಕಾಫಿ ಕುಡಿದ ನಂತರ ಹೊರಗೆ ಹೊರಟೆವು. ನಾವಿಬ್ಬರೂ ಬೀಚಿನ ಕಡೆ ನಡೆದೆವು. ಬೀಚಿನಲ್ಲಿ ಸ್ವಲ್ಪ ಕಾಲ ಮೌನದ ನಂತರ ನಾನು ಪ್ರಶ್ನಿಸಿದೆ:

'ಪ್ರಶ್ನಾ... ನೀನು ಪ್ರಶಾಂತನ್ನ ಪ್ರೀತಿಸ್ತೀಯ?'

'ಹೌದು... ಯಾಕೆ ?' ಕಕ್ಕಾಬಿಕ್ಕಿಯಾಗಿ ಕೇಳಿದಳು. 'ಮಗಳನ್ನ?' ಮತ್ತೆ ಪ್ರಶ್ನಿಸಿದೆ.

'ತುಂಬಾನೇ ಪ್ರೀತಿಸ್ತೀನೋ...' ಜೋರಾಗೇ ಹೇಳಿದಳು. 'ನಿನ್ನ ತಾಯಿ ತಂದೆಯರನ್ನ, ನಿನ್ನ ಅತ್ತೆ, ಮಾವಂದಿರನ್ನ...' ಜೋರಾಗಿ ಕೇಳಿದೆ.

'ಎಲ್ಲರನ್ನೂ ಪ್ರೀತಿಸ್ತೀನಿ... ನಿನ್ನನ್ನು ಕೂಡ... ಸರೀನಾ. ನಿನ್ನ ಪತ್ನಿ ಶ್ರದ್ಧಾಳನ್ನ ಕೂಡ... ನಿನ್ನ ತಾಯಿ ತಂದೆನೂ ಕೂಡ... ಮತ್ತೆ ಯಾರು ಯಾರು ಈ ಜಗತ್ತಿನಲ್ಲಿ ಇದ್ದಾರೋ ಎಲ್ಲರನ್ನೂ...' ಅವಳೂ ಕಿರುಚಿದಂತೇ ಹೇಳಿದಳು.

ತಕ್ಷಣ ದನಿ ತಗ್ಗಿಸಿ ಕೇಳಿದೆ, 'ಅವರೆಲ್ಲ ನಿನ್ನನ್ನ ಪ್ರೀತಿಸ್ತಾ ಇದ್ದಾರಾ?' ಅವಳು ಏಕ್ ದಂ ಮೌನಕ್ಕೆ ಜಾರಿದಳು. ನಂತರ ಮತ್ತೆ ಒತ್ತಿ ಕೇಳಿದೆ, 'ಅವರೆಲ್ಲ ನಿನ್ನನ್ನ ಪ್ರೀತಿಸ್ತಿದ್ದಾರಾ ಪ್ರಶ್ನಾ?'

'ಹೌದು... ಪ್ರೀತಿಸುತ್ತಿರಲೇ ಬೇಕು ಅಲ್ವ... ಅದನ್ನೇನು ಕೇಳೋದು?' ತಡೆ ತಡೆದು ಹೇಳಿದಳು.

'ನಿನಗೆ ಅಪನಂಬಿಕೇನಾ ಅವರ ಮೇಲೆ?' ತೀಕ್ಷ್ಣವಾಗಿ ಕೇಳಿದೆ. 'ಹಾಗೇನಿಲ್ಲ ಕಣೋ... ನನಗೆ ಹಾಗೆ ಯೋಚಿಸಬೇಕು ಅಂತ ಅನ್ನಿಸಿಯೇ ಇಲ್ಲ...'

'ಹಾಗಾದರೆ, ಈ ಮೌನ ಯಾರ ಮೇಲಿನ ಸೇಡು? ಯಾರ ಸಂತೋಷಕ್ಕಾಗಿ ಈ